## ಕವಿತೆ




## ರವೀಂದ್ರ ನಾಯಕ್ ಸಣ್ಣಕ್ಕಿಬೆಟ್ಟು

ಕಲೆ: ಸೌಮ್ಯಪ್ರಭು ಕಲ್ಯಾಣ್‌ಕರ್


# ಬದುಕ ಜಾತ್ರೆ



ಬೆಳಕನ್ನು ಹಾದು
ಕತ್ತಲೆಯನ್ನು ಅಪ್ಪಿಕೊಳ್ಳುವ ಹೊತ್ತು
ಬೆಳಕಿಗಾಗಿ ಹಂಬಲಿಸುವುದೆಂದರೆ,
ಬೆಳಕೂ ಇಲ್ಲದ
ಕತ್ತಲೆಯೂ ಒಲ್ಲದ
ಸುರಂಗದಲ್ಲಿ ಹಾದು ಹೋದಂತೆ.

ಇದ್ದಾಗ ಬಾಚಿಕೊಳ್ಳಬೇಕು.
ದಾಹದಲ್ಲಿ ಕುಡಿದ ರುಚಿ
ಉಳಿದ ನೀರಿಗೆ ದಕ್ಕದು.
ಬೊಗಸೆಯೋ ಸಾಗರವೋ
ಇನ್ನಿಲ್ಲದಂತೆ ಹೀರಿಕೊಳ್ಳಬೇಕು.

ತೆರೆ ಬಿದ್ದ ಮೇಲೆ
ಎಲ್ಲಿಯ ನಟನೆ?
ರಂಗದ ಮೇಲಿದ್ದಾಗಲೇ
ತೆರೆದುಕೊಳ್ಳಬೇಕು.

ಹಾರಿಹೋದ ಹಕ್ಕಿಯ
ಪಂಜರದ ಕದ ಮುಚ್ಚಿ
ಇನ್ನೂ ಹಕ್ಕಿಯ ಕಾಯುವುದೆಂದರೆ
ಇರವ ಮರೆವಿಗೆ
ಇಲ್ಲದ ಕೊರಗಿಗೆ
ಬದುಕ ಜಾತ್ರೆ ಮುಗಿದಂತೆ.